ಮೈಸೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 28ನೆ ಆಗಸ್ಟು 1909.

ಮೈಸೂರು ತಾಲ್ಲೂಕು ವರುಣದ ಹೋಬಳಿಗೆ ಸೇರಿದ ಜೋಡಿ ಹೊಸಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಮೈಸೂರು ತಾಲ್ಲೂಕು ಕಛೇರಿಯಲ್ಲಿ 1909ನೆ ಅಕ್ಟೋಬರು ಮಾಹೆ 18ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಫ್ಸೀಲ್ ಬಗ್ಗೆ ಸ್ರ 1909ನೆ ಇಸವಿ ಸೆಪ್ಟಂಬರ್ ತಾರೀಖು 9ನೆ ಮಕ್ರೂಂ 36ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 724ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಚಾಂಡಿ,
ಅಫೀಷಿಯೇಟಿಂಗ್ ಡೆಪ್ಯೂಟಿ ಕಮಿಷನರ್.

1909ನೆ ಇಸವಿ ಆಗಸ್ಟು ರವಿವಾರ 28ನೆ ತಾರೀಖು ಶನಿವಾರ ಪ್ರಾತಃಕಾಲ 7—30 ಘಂಟೆಗೆ ರಂಗಾಚಾರ್ಲು ಯವರ ಪೆರಿಯೋರಿಯಲ್ ಹಾಲಿನಲ್ಲಿ ನಡೆದ ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರುಗಳ ಆರ್ಡಿನೆರಿ ಮೀಟಿಂಗಿನ ಪ್ರೊಸೀಡಿಂಗ್ಸು.

ಹಾಜರು.

1. ಮಿ॥ ಕೆ. ಚಾಂಡಿ ಸಾಹೇಬರವರು, (ಪ್ರೆಸಿಡೆಂಟ್).
2. ,, ಎಂ. ಜಿ ಕೃಷ್ಣಸ್ವಾಮಿರಾಯರವರು, (ವೈಸ್ ಪ್ರೆಸಿಡೆಂಟ್).
3. ,, ವಿ. ಎಲ್. ಮಾಂಕರ್‌ರವರು, (ಮೈಸೂರು ಸಿಟಿ ಹೆಲ್ತ್ ಆಫಿಸರ್).
4. ,, ಸೈಯದ್ ಯಾಕೂಬ್ ಸಾಹೇಬರವರು, (ಮೈಸೂರು ತಾಲ್ಲೂಕು ಅಮಲ್ದಾರ್).
5. ,, ಎಂ. ವೆಂಕಟಕೃಷ್ಣಯ್ಯನವರು.
6. ,, ಬಿ ವೆಂಕಟಾಚಾರ್‌ರವರು.
7. ,, ಎಸ್. ಶ್ರೀಕಂಠೈಯ್ಯನವರು.
8. ,, ಎಂ. ನರಸುಂಹಸ್ವಾಮಿಗಳವರು.
9. ,, ಅನಂತರಾಜೈಯ್ಯನವರು.
10. ,, ರಹಿಮತ್ತುಲ್ಲಾ-ಅಹಮ್ಮದ್‌ಸೇಟರವರು.
11. ,, ಎ. ಸುಬ್ಬಣ್ಣನವರು.
12. ,, ವಿ. ತಿರುವೆಂಗಡ ಮೊದಲಿಯಾರ್‌ರವರು
13. ,, ಸೈದ್ ಮೊಹದೀ ಸಾಹೇಬರವರು.
14. ,, ಮಾದಪ್ಪನವರು
15. ,, ಜಹಗೀರ್‌ದಾರ್ ಮಾದಪ್ಪನವರು.
16. ,, ಹಸೇನಲ್ಲಿಬೇಗ್ ಸಾಹೇಬರವರು.
17. ರೆವರೆಂಡ್ ಗಲಿಫರ್ಡ್ ಸಾಹೇಬರವರು.

ಗೈರ್ಹಾಜರು.

1. ಮಿ॥ ಟಿ ಎಸ್. ಶೇಷಯ್ಯಂಗಾರ್‌ರವರು, (ಮೈಸೂರು ಡಿವಿಜ್ ಎಗ್ಜಿಕ್ಯೂಟಿವ್ ಇಂಜನಿಯರ್).
2. ,, ಎಂ. ಸಿ. ರಂಗೈಯ್ಯಂಗಾರ್‌ರವರು.
3. ,, ಅಂಬಳಿ ಅಂಣಯ್ಯಪಂಡಿತರವರು

I. 1909ನೆ ಇಸವಿ ಜುಲೈ ಮಾಹೆಯ ಜಮಾ ಖರ್ಚು ಲೆಕ್ಕ ಆಡಿಟರವರ ರಿಪೋರ್ಟು ಮತ್ತು ಇತರ ಜನನ ಮರಣ ವಗೈರೆ ಲೆಕ್ಕಗಳು ಮತ್ತು ಕಂಟ್ರೋಲರಿಂದ ಆಡಿಟ್ಟಾಗಿ ಬಂದ 1909ನೆ ಇಸವಿ ಜನವರಿ, ಫೆಬ್ರವರಿ ಮತ್ತು ಮಾರ್ಚಿ ಮಾಹೆಯ ಲೆಕ್ಕಗಳು.

ರಿಕಾರ್ಡು ಮಾಡಿದೆ. ಹೆಲ್ತ್ ಇಲಾಖಾ ವಿಸ್ತಾರಾದ ಮೇಲೆ ಪಟ್ಟಣದ ಸ್ಯಾನಿಟೇರ್ಷನ್ ಖಿಲವಾಯಿತೆಂದು ಅನೇಕ ಮ್ಯುನಿಸಿಪಲ್ ಕೌನ್ಸಿಲರುಗಳು ಹೇಳುತ್ತಾರಾದಕಾರಣ ಆರೋಗ್ಯಾಭಿವೃದ್ಧಿಪಡಿಸುವ ಭಾಗದಲ್ಲಿ ಯಾವ ಪದ್ಧತಿ ಅನುಸರಿಸಬೇಕೆಂಬ ಭಾಗದಲ್ಲಿ ಹೆಲ್ತ್ ಕಮಿಟಿಯವರ ರಿಪೋರ್ಟು ಕೇಳಬೇಕೆಂದು ತೀರ್ಮಾನ ಮಾಡಿ ಇದೆ.

ಮಿ॥ ಹಸೇನಲ್ಲಿ ಬೇಗರವರು ಮತ್ತು ಮಿ॥ ಜಹಗೀರ್‌ದಾರ್ ಮಾದಪ್ಪನವರು ಸಹ ಆಡಿಟರಾಗಿರಬೇಕೆಂದು ತೀರ್ಮಾನಿಸಿದೆ. ಮಿ॥ ವೆಂಕಟಾಚಾರ್‌ರು, ಮಿ॥ ಅಂಬಳಿ ಅಂಣಯ್ಯ ಪಂಡಿತರು, ಮಿ॥ ಮಾದಪ್ಪನವರು, ಮಿ॥ ನರಸುಹ್ಮಸ್ವಾಮಿಗಳು ಮತ್ತು ರಹಿಮತ್ತುಲ್ಲಾ ಅಹಮ್ಮದ್‌ಶೇಟರು ಸಹ ಸೇರಿ ಹೆಲ್ತ್ ಕಮಿಟಿಯಾಗಬೇಕೆಂದು ತೀರ್ಮಾನಿಸಿದೆ. ಮಿ॥ ಕೃಷ್ಣಸ್ವಾಮಿರಾಯರು ಮಿ॥ ರಂಗೈಯಂಗಾರ್‌ರು, ಮಿ॥ ಹಸೇನಲ್ಲಿಬೇಗ್ ಸಾಹೇಬರು, ಮಿ॥ ಶ್ರೀಕಂಠೈಯ್ಯನವರು, ಮಿ॥ ತಿರುವೆಂಗಡ ಮೊದಲಿಯಾರ್‌ರವರು ಸೇರಿ ಮ್ಯಾನೇಜಿಂಗ್ ಕಮಿಟಿಯಾಗಬೇಕೆಂತಲೂ, ರೆವರೆಂಡ್ ಮಿ॥ ಗಲಿಫರ್ಡ್ ಸಾಹೇಬರು, ಮಿ॥ ವೆಂಕಟಕೃಷ್ಣಯ್ಯನವರು, ಮಿ॥ ಮೊಹದೀಸಾಬರು, ಮಿ॥ ವೆಂಕಟಾಚಾರ್‌ರು, ಮಿ॥ ಜಹಗೀರ್‌ದಾರ್ ಮಾದಪ್ಪನವರು ಸಹ ಸೇರಿ ಸ್ಕೂಲ್ ಕಮಿಟಿಯಾಗಬೇಕೆಂತಲೂ ಇದಕ್ಕೆ ಮಿ॥ ವೆಂಕಟಕೃಷ್ಣಯ್ಯನವರು ಇದರ ಪ್ರೆಸಿಡೆಂಟರಾಗಿ ಇರಬೇಕೆಂತಲೂ ತೀರ್ಮಾನಿಸಿದೆ.

II. ವ್ಯಾನೇಜಿಂಗ್ ಮತ್ತು ಹೆಲ್ತ್ ಕಮಿಟಿಗಳ ಪ್ರೊಸೀಡಿಂಗ್ಸು.

ರಿಕಾರ್ಡುಮಾಡಿ ಖಾಯಂ ಮಾಡಿ ಇದೆ.

III. ತಮ್ಮ ಮನೆಗಳ ಮುಂದೆ ಇರುವ ಖಾಲಿ ಜಾಗಗಳಿಗೆ ಕೌನ್ಸಿಲ್ಲಿನವರು ವಿಧಾಯಕ ಮಾಡುವ ಟೈಪ್ ಪ್ಲಾನ್ ಪ್ರಕಾರ ಕಾಂಪೌಂಡು ಗೋಡೆ ಹಾಕಿಕೊಳ್ಳುವದಕ್ಕೆ ಅಪ್ಪಣೆ ಬೇಡಿ ಮೈಸೂರು ಲಕ್ಷ್ಮೀವಿಲಾಸ ಅಗ್ರಹಾರದ ನಿವಾಸಿಗಳು ಬರೆದುಕೊಂಡಿರುವ ಅಪ್ಲಿಕೇಷನ್.

ಮುಂದಲ ಮೀಟಿಂಗಿಗೆ ಅಜ್ಜರ್ಡ ಮಾಡಿ ಇದೆ.

IV. ಚಟ್ನಹಳ್ಳಿ ರೋಡು ಎಕ್ಸ್‌ಟೆನ್ಷನ್ನಲ್ಲಿ ಕ್ಯಾಟಲ್ ಟ್ರಫ್ ವಾಟರ್ ಸಪ್ಲೈ ಪೈಪ್‌ಗಳನ್ನು ಬಡಾಯಿಸಲು 1,100 ರೂ ಪಾಯಿನ ಅಂದಾಜವನ್ನು ಮುಂಜೂರ್ಮಾಡಿರುವದಾಗಿ ಗೌರ್ನಮೆಂಟಿನಿಂದ ಸಾದರಾಗಿರುವ 28—7—09ನೆ ಮತ್ತು ಂ 1065-8-ಮ್ಯು 12-08ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

V. ಹಂಗಾಮಿ ವ್ಯಾಕ್ಸಿನೇಟರುಗಳನ್ನು ಈ ಸಾಲು ಆಖ್ಯೆರ ವರಿಗೂ ಇಟ್ಟುಕೊಳ್ಳಲು ಅಪ್ಪಣೆ ಕೇಳಿ ಹೆಲ್ತ್ ಆಫಿಸರವರಿಂದ ತಲಪಿರುವ 19—7—09ನೆ ಮತ್ತು ಂ 119ನೆ ನಂಬರ್ ಡಾಕೆಟ್.

ಜುಲೈ ತಿಂಗಳಲ್ಲಿ ಈ 4 ಜನ ವ್ಯಾಕ್ಸಿನೇಟರುಗಳಿಂದ 63 ಜನಗಳು ಶಿಡುಬು ಹಾಕಲ್ಪಟ್ಟು ಇದಾರೆ, ಇದು ತುಂಬಾ ಅತೃಪ್ತಿಕರವಾಗಿ ಇದೆ. ಎಷ್ಟು ಜನ ವ್ಯಾಕ್ಸಿನೇಟರುಬೇಕೆಂಬ ವಿಷಯ ಅವರು ಮಾಡತಕ್ಕ ಕೆಲಸದ ವಿಧಾನವನ್ನು ಸಹ ಹೆಲ್ತ್ ಕಮಿಟಿಯವರು ಚರ್ಚೆ ಮಾಡಬೇಕೆಂತಲೂ ಮತ್ತು ಹಾಲಿ ಕೌನ್ಸಿಲ್ಲನವರು ಪ್ಲೇಗ್ ನಿವಾರಣೆ ಏರ್ಪಾಡಿನಲ್ಲಿ ಇರುವದ್ದರಿಂದಲೂ ಈ ಹಂಗಾಮಿ ಜನಗಳು ತೃಪ್ತಿಕರವಾಗಿ ಕೆಲಸ ಮಾಡುತ್ತಾ ಇರುವದಿಲ್ಲವಾದ್ದರಿಂದಲೂ, ಹೆಲ್ತ್ ಕಮಿಟಿಯವರಿಂದ ಬರುವ ರಿಪೋರ್ಟು ನೀರೀಕ್ಷಣೆಯಿಂದ ಇವರ ಸರವಿಸ್ಸನ್ನು ವಜಾ ಮಾಡಬೇಕೆಂತಲೂ ಸಹ ತೀರ್ಮಾನ ಮಾಡಿ ಇದೆ.

VI. ಇಪ್ಪತ್ತು ರೂಪಾಯಿಗಳಿಗಿಂತ ಹೆಚ್ಚಾಗಿ ಮನೆ ಕಂದಾಯ ಕೊಡತಕ್ಕ ಮನೆಗಳಿಗೆ ಮೀಟರ್ ಇಡತಕ್ಕ ವಿಷಯದಲ್ಲಿ ವಾಟರ್ ಸಪ್ಲೈ ಮತ್ತು ಸ್ಯೂವರ್ಸ್ ಡಿವಿಜ್ ಎಸ್ಸಿಕ್ಯೂಟಿವ್ ಇಂಜನಿಯರಿಂದ ತಲಪಿರುವ 29—7—09ನೆ ಮತ್ತು ಂ 1686ನೆ ನಂಬರ್ ಡಾಕೆಟ್ ಮತ್ತು ಇದೇ ವಿಷಯದಲ್ಲಿ ಚೀಫ್ ಇಂಜನಿಯರವರಿಂದ ತಲಪಿರುವ ಲೆಟರ್.

ರಿಕಾರ್ಡು ಮಾಡಿ ಇದೆ.

ಟ್ರಸ್ಟಿ ಬೋರ್ಡಿನವರು ಇರಾದೆ ಕೊಟ್ಟಿರುವಂತೆ ಷಹರಿನ ನೀರು ಸರಬರಾಯಿ ವಿಚಾರಣೆ ಮ್ಯುನಿಸಿಪಲ್ ಕೌನ್ಸಿಲ್ಲಿಗೆ ಕೊಡಬೇಕೆಂತಲೂ ಮ್ಯುನಿಸಿಪಲ್ ಇಲಾಖೆಯವರು ಈ ಖರ್ಚು ಭಾರ್ಜು ವಹಿಸಬೇಕೆಂಬ ವಿಚಾರವನ್ನು ಬಹಳ ಚನ್ನಾಗಿ ಪರಿಶೋಧಿಸತಕ್ಕದ್ದೆಂತಲೂ ಇದಕ್ಕಾಗಿ ಇಂಜನಿಯರ್ ಇಲಾಖೆ ಬಬ್ಬ ಆಫಿಸರು, ಪ್ರಸಿಡೆಂಟರು, ವೈಸ್ ಪ್ರಸಿಡೆಂಟರು, ಮಿ॥ ರಂಗೈಯ್ಯಂಗಾರ್ರು ಮತ್ತು ಮಿ॥ ವೆಂಕಟಕೃಷ್ಣಯ್ಯನವರು ಸಹ ಸೇರಿ ಇರುವ ಮ್ಯುನಿಸಿಪಲ್ ಕಮಿಟಿಯನ್ನು ಸಂಧಿಸಬೇಕೆಂದು ಕೇಳಿಕೊಳ್ಳಬೇಕೆಂತಲೂ ತೀರ್ಮಾನ ಮಾಡಿ ಇದೆ.

VII. ರಾಗಿ ಧಾರಣೆ ಛಡಾವಾಗಿರತಕ್ಕ ಸ್ಥಳಗಳಲ್ಲಿ ಗ್ರೈನ್ ಕಂಪರ್ಸೇರ್ಸ ಅಲೋಯರ್ಸ್ ಯಾನೆ ಮುಂಗೈ ಭತ್ಯವನ್ನು 1909ನೆ ಇಸವಿ ಜುಲೈ ಮಾಹೆಗೆ ಖಟವಾಡಿ ಮಾಡಬಹುದೆಂದು ಗವರ್ನಮೆಂಟಿನಿಂದ ಸಾದರಾಗಿರುವ 14-8-09ನೆ ಮತ್ತು ಂ ರೆ. 1420-61—ಅಗ್ರಿ. 25-08-1ನೆ ನಂಬರ್ ಪ್ರೊಸೀಡಿಂಗ್ಸು.

ಮ್ಯುನಿಸಿಪಲ್ ನವುಕರ ಮಾನೇರಿಗೆ ಜುಲೈ ತಿಂಗಳು ಅಲೋಯರ್ಸ್ ಕೊಡತಕ್ಕದ್ದೆಂದು ತೀರ್ಮಾನಿಸಿ ರಿಕಾರ್ಡು ಮಾಡಿ ಇದೆ.

VIII. ಡೆಪ್ಯುಟಿ ಅಮಲ್ದಾರರ ತಲಬು ಮತ್ತು ದರ್ಜಾದವೇಲೆ ಮಿ॥ ಟಿ. ಹನುಮಂತರಾಯರನ್ನು ಮೈಸೂರು ಸಿಟಿ ಮ್ಯುನಿಸಿಪಾಲಿಟಿಯಲ್ಲಿ ಸ್ಪೆಷಲ್ ಡ್ಯೂಟಿವೇಲೆ ನೇಮಿಸಿರುತ್ತೆಂದು ಗವರ್ನಮೆಂಟಿನಿಂದ ಸಾದರಾಗಿರುವ 26-7-09ನೆ ಮತ್ತು 984-8—ಮ್ಯು. 330-08ನೆ ನಂಬರು ಪ್ರೊಸೀಡಿಂಗ್ಸು ಮತ್ತು 1906ನೆ ಇಸವಿ ಮ್ಯುನಿಸಿಪಲ್ ರೆಗ್ಯುಲೇರ್ಸ 82, 83 ಮತ್ತು 84ನೆ ಸೆಕ್ಷನ್‌ಗಳಲ್ಲಿ ವಳಗೊಂಡಿರುವ ಅಧಿಕಾರಗಳನ್ನು ತಮಗೆ ಕೊಡಿಸಬೇಕೆಂಬ ವಿಷಯದಲ್ಲಿ ಡೆಪ್ಯುಟಿ ಅಮಲ್ದಾರ್ರವರು ಬರೆದುಕೊಂಡಿರುವ 22-8-09ನೆ ಮತ್ತು ಂ ಲೆಟರ್.

ರಿಕಾರ್ಡು ಮಾಡಿ ಇದೆ. ಮ್ಯುನಿಸಿಪಲ್ ರೆಗ್ಯುಲೇರ್ಸ 37ನೆ ಸೆಕ್ಷನ್ ಪ್ರಕಾರ, 82, 83 ಮತ್ತು 84ನೆ ಸೆಕ್ಷನ್‌ಗಳಲ್ಲಿ ಕಂಡ ಅಧಿಕಾರಗಳನ್ನು ಸ್ಪೆಷಲ್‌ಡ್ಯೂಟಿ ಆಫಿಸರಿಗೆ ಕೊಡತಕ್ಕದ್ದೆಂದು ತೀರ್ಮಾನ ಮಾಡಿ ಇದೆ.

IX. ಜೀವಣರಾಯನ ಕೆರೆ ವಳಗೆರೆಯನ್ನು ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಮಿ॥ ಶ್ರೀಕಂಠೈಯ್ಯನವರಿಗೆ ಕೊಡತಕ್ಕ ವಿಷಯದಲ್ಲಿ ಗವರ್ನಮೆಂಟಿನಿಂದ ಸಾದರಾಗಿರುವ 16-8-09ನೆ ಮತ್ತು ಂ 1711-2—ಮ್ಯು. 506-08-5ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

X. ಮೈಸೂರು ಷಹರ್ ಮೊಹಲ್ಲೆಗಳಿಗೆ ಚುನಾವಣೆಯಾದ ಮ್ಯುನಿಸಿಪಲ್ ಕೌನ್ಸಿಲರುಗಳ ಹೆಸರುಗಳನ್ನು ಫಾಯಿಷ್ ಮಾಡಿ ಗವರ್ನಮೆಂಟಿನಿಂದ ಸಾದರಾಗಿರುವ 31—7—09ನೆ ಮತ್ತು ಂ 1291—ಮ್ಯು. 54-09-3ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿದೆ.

XI. ಮೂರು ವರುಷ ಪರಯಂತರವಾಗಿ ಮೈಸೂರು ಷಹರಿಗೆ ಮ್ಯುನಿಸಿಪಲ್ ಕೌನ್ಸಿಲರುಗಳಾಗಿ ಗವರ್ನಮೆಂಟಿನವರು ನೊಕರೂರ್ ಮಾಡಿರುವ ದೊಡ್ಡ ಮನುಷ್ಯರುಗಳ ಹೆಸರುಗಳು ಫಾಯಿಷ್‌ನಿಂದ ಸಾದರಾಗಿರುವ 16-8-09ನೆ ಮತ್ತು ಂ 1713—ಮ್ಯು. 51-09-4ನೆ ನಂಬರ್ ಗವರ್ನಮೆಂಟ್ ಆರ್ಡರ್.

ರಿಕಾರ್ಡು ಮಾಡಿ ಇದೆ.

XII. ಷಹರಿನ ರೋಡು ಸ್ಪೆಷಲ್ ರಿಪೇರಿಗಾಗಿ ಅರ್ಧ ಖರ್ಚು 5,313 ರೂಪಾಯಿಗೆ ಮೀರದಷ್ಟು ಮೊಬಲಗನ್ನು ಸ್ಟೇಟ್ ಕಂಟ್ರಿಬ್ಯೂಷನ್ ಆಗಿ ಮ್ಯುನಿಸಿಪಾಲಿಟಿಗೆ ಕೊಡತಕ್ಕದ್ದೆಂದು ಮುಂಜೂರ್ಮಾಡಿ ಗವರ್ನಮೆಂಟಿನಿಂದ ಸಾದರಾಗಿರುವ 26-8-09ನೆ ಮತ್ತು ಂ 2007-8—ಮ್ಯು. 204-09ನೆ ನಂಬರ್ ಪ್ರೊಸೀಡಿಂಗ್ಸು.

ರಿಕಾರ್ಡು ಮಾಡಿ ಇದೆ.

ಕೆ. ಚಾಂಡಿ, ಪ್ರೆಸಿಡೆಂಟ್.

ಮೈಸೂರು ಸಿಟಿ ಮ್ಯುನಿಸಿಪಲ್ ಕೌನ್ಸಿಲರ ಆಫೀಸಿಗೆ.

ತಾರೀಖು 26ನೆ ಆಗಸ್ಟು 1909.

ಆಡಿಟರ ರಿಪೋರ್ಟು.

ಸ್ಯೆ 1909ನೆ ಇಸವಿ ಆಗಸ್ಟ್ ತಿಂಗಳು 25ರಲ್ಲಿ ಜುಲೈ ಮಾಹೆ ಲೆಕ್ಕ ಮತ್ತು ವವಚರುಗಳನ್ನು ಆಡಿಟ್ ಮಾಡಲಾಯಿತು.

1. ಫೇರ್ಸ್ ಮತ್ತು ಫೆಸ್ಟಿವಲ್‌ಗಳಲ್ಲಿ ಕೆಲಸ ಮುಂತಾದ್ದು ನಡೆಯಬೇಕಾದ ಕಾಲಕ್ಕೆ ಟೆಂಡರು ಕಾಲ್ ಮಾಡುವದೆ ಅವಶ್ಯಕ.

2. ಹೆಲ್ತ್ ಫೀಸಿನಿಂದೆ ಸೆಸ್ ಚಾಮರಾಜಮೊಹಲ್ಲಾ ಮತ್ತು ನಜರುಬಾದು ಮೊಹಲಾಕ್ಕೆ 27-5-6 ಮಾತ್ರ ವಸೂಲಾಗಿದೆ. ವಸೂಲಿ ಕ್ರಮ ಸರಿಯಾಗಿ ಮಾಡುವಹಾಗೆ ಕಾಣುವದಿಲ್ಲ.

3. ಮ್ಯುನಿಸಿಪಲ್ ಮೊಹತಫರ್ಕಾ ವಗೈರೆ.

				ರೂ.	ಆ.	ಪೈ.
1908ರಲ್ಲಿ	...	...	...	5,321	14	0
1909ರಲ್ಲಿ	...	...	...	5,278	1	10
			ಜುಮ್ಲಾ ವ್ಯತ್ಯಾಸ	... 43	12	2

ಹೆಚ್ಚಾಗಿ ಸಿಬ್ಬಂದಿ ಇದ್ದರೂ ವಸೂಲಿ ಕ್ರಮ ಬಹಳ ಸುಸ್ತಿಯಲ್ಲೇ ಬರುತ್ತಾ ಇದೆ.

4. ಹಾರಸು ಅಲೋಯನ್ಸ್ ವಗೈರೆ ತೆಗೆದುಕೊಳ್ಳುವದು ಹಾರಸು ವಗೈರೆ ಇಟ್ಟು ಉಪಯೋಗಿಸುವದಕ್ಕೆ ಅಥವಾ ಹ್ಯಾಗೆ? ಒಂದು ವ್ಯಾಳೆ ಉಪಯೋಗಿಸದೆ ಇದ್ದರೆ ಅಲೋಯನ್ಸನ್ನು ಯಾತಕ್ಕೆ ನಿಲ್ಲಿಸಬಾರದು.

(ಸೈ॥ಡ) ಎ. ಶ್ರೀಕಂಠೈಯ್ಯಂಗಾರ್.

ಕಡೂರು ಡಿಸ್ಟ್ರಿಕ್ಟ್.

1909ನೆ ಸೆಪ್ಟಂಬರ್ ತಾರೀಖು 4.

ಇದರಿಂದ ಸರ್ವಸ್ವ ಜನಗಳಿಗೂ ತಿಳಿಯಪಡಿಸುವದೇನಂದರೆ—1909ನೆ ಇಸವಿ ನವಂಬರು ಗುರ್ಸೇ ಲಾಗಾಯಿತು 1910ನೆ ಇಸವಿ ಜೂನ್ ಆಖೈರಿ ವರೆಗೆ ಆಗುವ 8 ತಿಂಗಳಿಗೆ ಕಡೂರು ಡಿಸ್ಟ್ರಿಕ್ಟಿನಲ್ಲಿನ ಮೂಡಗೆರೆ ತಾಲ್ಲೂಕು ಕೊಟ್ಟಗೆಹಾರ (ಬೂಂದು ಫಾಟ್) ಟೋಲ್ ಗೇಟಿನಲ್ಲಿ ಟೋಲ್‌ಯಾನೆ ಸುಂಕವನ್ನು ವಸೂಲ್ಮಾಡುವ ಬಾಬನ್ನು ಡೆಪ್ಯುಟಿ ಕಮಿಷನರ್ ಯಾ ಅವರಿಂದ ಈ ಕೆಲಸಕ್ಕೆ ನೇಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರವರಿಂದ ಮೂಡಗೆರೆ ತಾಲ್ಲೂಕು ಕಛೇರಿಯಲ್ಲಿ 1909ನೆ ಇಸವಿ ಆಕ್ಟೋಬರು 2ನೆ ತಾರೀಖು ಶನಿವಾರ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಎಲ್ಲಾ ಸವಾಲ್‌ಗಳಿಗಿಂತಲೂ ಜಾಸ್ತಿಯಾದ ಛಡ ದರಖಾಸ್ತು ಸರಿಯಾಗಿ ಕಂಡುಬಂದಲ್ಲಿ ಗವರ್ನಮೆಂಟ್ ಮಂಜೂರಿಗೆ ಬಳಪಟ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ ಅಂಗೀಕರಿಸಲ್ಪಡುತ್ತೆ. ಛಡ ದರಖಾಸ್ತನ್ನಾಗಲಿ ಯಾ ಇತರ ದರಖಾಸ್ತನ್ನಾಗಲಿ ಯಾವ ಸಬಬನ್ನು ತಿಳಿಸದೇನೆ ಅಂಗೀಕರಿಸುವದಕ್ಕೆ ಯಾ ತಿರಸ್ಕರಿಸುವದಕ್ಕೆ ಡೆಪ್ಯುಟಿ ಕಮಿಷನರವರು ಅಧಿಕಾರ ಉಳಿಸಿಕೊಂಡಿರುತ್ತಾರೆ.

3. ಛಡ ದರಖಾಸ್ತುದಾರನು ಹರಾಜಿನ ಕೂಡಲೆ ಹರಾಜು ಮೊಬಲಗಿನ ಪೈಕಿ ನಾಲ್ಕನೆ ಬಂದು ಅಂಶದ ಮೊಬಲಗನ್ನು ನಗದಾಗಿ ಅಥವಾ ಡೆಪ್ಯುಟಿ ಕಮಿಷನರವರಿಗೆ ಪಾವತಿ ಮಾಡಬಹುದೆಂಬ ಪರಾ ಬರಿಸಲ್ಪಟ್ಟ ಗವರ್ನಮೆಂಟ್ ಆಫ್ ಇಂಡಿಯಾ ಪ್ರೋನೋಟು ಮೂಲಕವಾಗಿ ಡಿಪಾಜಿಟ್ಟು ಇಡಬೇಕು. ಹಾಗೂ ರೂಪಾಯಿ ಬಂದರೆ ಬಂದಾಣೆಯಂತೆ ಆ ಮೊಬಲಗಿನ ಮೇಲೆ ಆಗುವ ಲೋಕಲ್ ಸೆಸ್ ಸಹಾ ಕೊಡಬೇಕು. ಗವರ್ನಮೆಂಟಿನಿಂದ ಹರಾಜು ಸಂಬಂಧವಾಗಿ ಒಂದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ನಿಧಿ ಸದರಿ ಮೊಬಲಗನ್ನು ಮೂಡಿಗರೆ ತಾಲ್ಲೂಕು ಖಜಾನೆಗೆ 1909ನೆ ಡಿಸೆಂಬರ್ ತಾರೀಖು 15ರ ಲಾಗಾಯಿತು ಸಮಾನಾದ 6 ಖಿಸ್ತುಗಳಾಗಿ ಪ್ರತಿ ತಿಂಗಳ 15ನೆ ತಾರೀಖಿಗೆ ಪಾವತಿ ಮಾಡಬೇಕು. ಡಿಪಾಜಿಟ್ಟಿನ ಮೊಬಲಗು ಆಖೈರು 2 ಖಿಸ್ತುಗಳಿಗೆ ಜಮ ಮಾಡಿಕೊಳ್ಳಲ್ಪಡುತ್ತೆ. ದರಖಾಸ್ತುದಾರನು ಮೂಹೇವರ್ ಖಿಸ್ತು ನೊಬಲಗನ್ನು ತಪ್ಪದೆ ಕೂಡುತ್ತಾ ಬರುವದಕ್ಕೆ ಇಬ್ಬರನ್ನ ಜಾಮೀನು ಕೊಡಬೇಕು. ಮತ್ತು ಹರಾಜು ಮುಂಜಾವರಿ ಸಂಗತಿ ತಿಳಿದ ತಾರೀಖು ಲಾಗಾಯಿತು 8 ದಿವಸದ ಒಳಗೆ ಅ ವಶ್ಯಕವೆಂಬ ಕರಾರನ್ನು ಛಾಪಾಕಾಗದದಲ್ಲಿ ಬರೆದುಕೊಡಬೇಕು. ಠೇವಣಿ ಇಡದ ಇದ್ದರೆ ಅಥವಾ ಜಾಮೀನ್ ಕೊಡದೆ ಇದ್ದರೆ ಡಿಪಾಜಿಟ್ಟು ಮೊಬಲಗು ದಂಡವಾಗಿ ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ. ಮತ್ತು ಸದರಿ ಕಂಟ್ರಾಕ್ಟನ್ನು 2ನೆ ಹರಾಜು ಮಾಡಲ್ಪಡುವುದು. ಹೀಗೆ ಮಾಡಿದ್ದರಲ್ಲಿ ಸರಕಾರಕ್ಕೆ ಲುಕ್ಸಾನು ಸಂಭವಿಸಿದ್ದಲ್ಲಿ ಕಂಟ್ರಾಕ್ಟುದಾರನ ಅಥವಾ ಅವನ ಜಾಮೀನುದಾರರ ಜಿಂದಿಗೆ ಹರಾಜು ಮಾಡಿಸಿ ವಸೂಲು ಮಾಡಿಕೊಳ್ಳಲ್ಪಡುತ್ತೆ.

4. ಪ್ರತಿ ಮಾಹಯಲ್ಲಿಯೂ ಕೂಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನೊಳಗಾಗಿ ಪಾವತಿ ಮಾಡಲು ತಪ್ಪಿದರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ನೀರ ಬಡ್ಡಿ ಸೇರಿಸಿ ಖಿಸ್ತು ಮೊಬಲಗು ವಸೂಲ್ಮಾಡಲ್ಪಡುತ್ತೆ.

5. ಕಂಟ್ರಾಕ್ಟರು ಹರಾಜಿನಲ್ಲಿ ಪಡೆಯುವ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಲೋಕಲ್ ಸೆಸ್ ಕೊಡಲಿಕ್ಕೆ ಬದ್ಧನಾಗಿರುತ್ತಾನೆ.

6. ಕಂಟ್ರಾಕ್ಟರಿಂದ ಯಾ ಅವನ ಜಾಮೀನುದಾರರಿಂದ ಬಾಕಿ ಮೊಬಲಗು ಬಾರದೆ ಇದ್ದಲ್ಲಿ ಲ್ಯಾಂಡ್ ರವಿನ್ಯೂ ಬಾಕಿ ವಸೂಲಿಗೆ ಹಾಲಿ ಜಾರಿಯುಲ್ಲರುವ ನಿಬಂಧನೆ ಅನುಸರಿಸಿ ವಸೂಲ್ಮಾಡಲ್ಪಡುತ್ತೆ.

7. ಪ್ರತಿ ದಿನಸದ ಟೋಲ್ ವಸೂಲ್ ತೋರಿಸುವ ಲಬ್ಬನನ್ನು ಇಡಲು ಕಂಟ್ರಾಕ್ಟುದಾರನು ಬದ್ಧನಾಗಿರುವದಲ್ಲದೆ ಸದರಿ ಲಬ್ಬವ ಡೆಪ್ಯುಟಿ ಕಮಿಷನರ್ ಅಸಿಸ್ಟೆಂಟ್ ಕಮಿಷನರ್ ಮತ್ತು ಸದರಿ ಟೋಲ್ ಯಾವ ತಾಲ್ಲೂಕಿನಲ್ಲಿದೆಯೋ ಆ ತಾಲ್ಲೂಕು ಅವಲ್‌ದಾರ್ರು ತನಿಖೆಗೆ ಬಳಗುಗಿರ್ಪಡಿಕ್ಕುದ್ದು.

8. ಕಂಟ್ರಾಕ್ಟರು ಇದರಿಂದ ಕಾಣಿಸಿರುವ ಪೆಟ್ಯೂಲಿನಲ್ಲಿ ಕಂಡ ದರಗಳ ಪ್ರಕಾರವಲ್ಲದ ಅನ್ಯಥಾ ಟೋಲ್ ಸುಂಕವನ್ನು ವಸೂಲ್ ಮಾಡಕೂಡದ್ದು. ಹಾಗ ಮಾಡಿದ್ದಾದರೆ ಕಂಟ್ರಾಕ್ಟನ್ನು ರದ್ದುಮಾಡಿಸುವದಲ್ಲದೆ ಕಂಟ್ರಾಕ್ಟುದಾರನನ್ನು ಕ್ರಿಮಿನಲ್ ತಪ್ಪು ವ್ಯವಸ್ಥಾಕ್ಕೆ ಗುರಿಪಡಿಸುತ್ತೆ.